# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಮ್/1817/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ–18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 02/02/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಚನ್ನವೀರಯ್ಯ ತಂದೆ ಬಸವರಾಜ ಹಿರೇಮಠ, ಗ್ರಾಮಲೆಕ್ಕಾಧಿಕಾರಿಗಳು, ಸಾರವಾಡ ಗ್ರಾಮ, ವಿಜಯಪುರ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1) ಮಂಡ್ಯ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಚನ್ನವೀರಯ್ಯ ತಂದೆ ಬಸವರಾಜ ಹಿರೇಮಠ, ಗ್ರಾಮಲೆಕ್ಕಾಧಿಕಾರಿಗಳು, ಸಾರವಾಡ ಗ್ರಾಮ, ವಿಜಯಪುರ ಜಿಲ್ಲೆ ಸರ್ಕಾರಿ/ಸಾರ್ವಜನಿಕ ನೌಕರಾಗಿರುತ್ತಾರೆ. (ಇನ್ನು ಮುಂದೆ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಶ್ರೀ ಅನಿಲಕುಮಾರ ತಂದೆ ಸೋಮನಾಥ ವಿಜಾಪುರ, ಕಂಪ್ಯೂಟರ್ ಆಪರೇಟರ್, ಸಾ: ಸಾರವಾಡ ಗ್ರಾಮ, ಬಬಲೇಶ್ವರ ತಾಲ್ಲೂಕು, ವಿಜಯಪುರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2) <u>ಪ್ರಕರಣದ ಸಂಕ್ಷಿಪ್ತ ಸಾರಾಂಶ</u>:– ದೂರುದಾರರ ತಂದೆಯವರಾದ ಸೋಮನಾಥ ವಿಜಾಪುರರವರ ಹೆಸರಿನಲ್ಲಿ ಸ.ನಂ. 522 ರಲ್ಲಿ 5 ಎಕರೆ 20 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನನ್ನು ದೂರುದಾರರಿಗೆ ಮತ್ತು ದೂರುದಾರರ ಅಣ್ಣನಾದ ಮಲ್ಲಿಕಾರ್ಜುನ ರವರ ಹೆಸರಿನಲ್ಲಿ ಪಾಲು ಮಾಡಿಸಲು ದೂರುದಾರರ ತಂದೆಯವರು ದಿ: 21/08/2018 ರಂದು

ಬಬಲೇಶ್ವರ ವಿಶೇಷ ತಹಶೀಲ್ದಾರ್‌ರವರ ಕಛೇರಿಯಲ್ಲಿ ಅರ್ಜಿಯನ್ನು ಕೊಟ್ಟಿರುತ್ತಾರೆ. ಅದಾದ 10-12 ದಿನಗಳ ನಂತರ ಎದುರುದಾರರು ದೂರುದಾರರಿಗೆ ವಿಜಯಪುರ ಡಿ.ಸಿ. ಆಫೀಸಿನ ಸಮೀಪವಿರುವ ತಮ್ಮ ರೂಮಿಗೆ ಕರೆಯಿಸಿ ದೂರುದಾರರಿಗೆ "ನಿಮ್ಮ ಜಮೀನು ವಾಟ್ನಿಗೆ ಸಂಬಂಧಿಸಿದ ಪೇಪರ್ ನನ್ನ ಕಡೆಗೆ ಬಂದಿರುತ್ತದೆ. ನೀವು 5,000/- ರೂ.ಗಳನ್ನು ಲಂಚವಾಗಿ ಕೊಟ್ಟರೆ ಮಾಡಿಸಿಕೊಡುತ್ತೇನೆ" ಎಂದು ಹೇಳಿರುತ್ತಾರೆ. ಆಗ ದೂರುದಾರರು ಅಷ್ಟು ಹಣ ಕೊಡಲು ಆಗುವುದಿಲ್ಲ, ಈಗಾಗಲೇ 1500/- ರೂ. ತುಂಬಿರುತ್ತೇನೆ ಎಂದು ಹೇಳಿರುತ್ತಾರೆ. ದೂರುದಾರರು ದಿ: 29/08/2018 ರಂದು ವಿಜಯಪುರ ಝಡ್.ಪಿ. ಕಛೇರಿಯಲ್ಲಿ ಕರ್ತವ್ಯದ ಮೇಲಿದ್ದಾಗ ಎದುರುದಾರರು ದೂರುದಾರರಿಗೆ ತಹಶೀಲ್ದಾರ್ ಆಫೀಸಿನ ಮುಂದೆ ಕರೆಯಿಸಿ ರೂ. 5,000/- ಕೊಟ್ಟರೆ ಮುಂದಿನ ಕೆಲಸವನ್ನು ಮಾಡುತ್ತೇನೆ ಎಂದು ಹೇಳಿರುತ್ತಾರೆ. ಈಗ ಸಕಾಲ ಇರುವುದರಿಂದ ಬಹಳ ದಿನ ಇಟ್ಟುಕೊಳ್ಳಲು ಆಗುವುದಿಲ್ಲ, ರದ್ದು ಮಾಡಿಸಬೇಕಾಗುತ್ತದೆ ಹಣ ಕೊಟ್ಟರೆ ಇವತ್ತು ಸಾಯಂಕಾಲದೊಳಗೆ ಅಪ್ರೂವಲ್ ಕೊಡಿಸುತ್ತೇನೆ ಎಂದು ಹೇಳಿರುತ್ತಾರೆ. ದೂರುದಾರರು ಈ ಎಲ್ಲಾ ಸಂಭಾಷಣೆಗಳನ್ನು ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಂತರ ದೂರುದಾರರು "ನನ್ನ ಹತ್ತಿರ ಈಗ ಹಣವಿಲ್ಲ, ಎರಡು ದಿನ ಬಿಟ್ಟು ಬರ್ತೀನಿ" ಅಂತ ಹೇಳಿರುತ್ತಾರೆ. ದೂರುದಾರರು ಈ ಬಗ್ಗೆ ತಮ್ಮ ತಂದೆಯವರಿಗೆ ತಿಳಿಸಿದಾಗ ಅವರು ಲಂಚ ಕೊಡುವುದು ಬೇಡ ಅಂತ ಹೇಳಿರುತ್ತಾರೆ. ಹೀಗಾಗಿ ದೂರುದಾರರು ದೂರು ಕೊಡಲು ತೀರ್ಮಾನಿಸಿರುತ್ತಾರೆ.

3) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 01/10/2018 ರಂದು ಬೆಳಿಗ್ಗೆ 11-45 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ವಿಜಯಪುರ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 09/2018 ಪಿ.ಸಿ. ಕಾಯಿದೆ ಕಲಂ 7(ಎ) ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4) ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಬಾಬುಗೌಡ ತಂದೆ ಬಸವರಾಜ ಪಾಟೀಲ ಮತ್ತು ಶ್ರೀ ಮಲ್ಲನಗೌಡ ತಂದೆ ಬಸನಗೌಡ ಪಾಟೀಲ ಇವರನ್ನು ಬರಮಾಡಿಕೊಂಡು, ತನಿಖಾಧಿಕಾರಿಗಳು ಪಂಚರುಗಳ ಪರಿಚಯ ಮಾಡಿಕೊಂಡಿರುತ್ತಾರೆ ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ಪ್ರಥಮ ವರ್ತಮಾನ ವರದಿ ಮತ್ತು ದೂರಿನ ನಕಲು ಪ್ರತಿಯನ್ನು ಪಂಚರುಗಳಿಗೆ ತನಿಖಾಧಿಕಾರಿಗಳು ನೀಡಿ ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರ ಮೊಬೈಲನ್ನು

ಪಂಚರಿಗೆ ತೋರಿಸಿ ಅದರಲ್ಲಿ ದೂರುದಾರರು ಲಂಚದ ವಿಷಯದ ಬಗ್ಗೆ ಎದುರುದಾರರೊಂದಿಗೆ ಮಾತನಾಡಿದ ಸಂಭಾಷಣೆಯನ್ನು ರೆಕಾರ್ಡಿಂಗ್ ಮಾಡಿಕೊಂಡಿರುತ್ತಾರೆ ಅಂತ ಹೇಳಿ ಮೊಬೈಲ್‌ನ್ನು ಯು ಎಸ್ ಬಿ ಕೇಬಲ್ ಮೂಲಕ ಲ್ಯಾಪ್‌ಟಾಪ್‌ಗೆ ಅಳವಡಿಸಿ ಅದರಲ್ಲಿಯ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಅದರಲ್ಲಿಯ ಸಂಭಾಷಣೆಯನ್ನು ಪ್ರತ್ಯೇಕವಾಗಿ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿಕೊಂಡು ದೂರುದಾರರಿಗೆ ಮೊಬೈಲನ್ನು ಮರಳಿ ನೀಡಿ ಸದರಿ ಮೊಬೈಲನ್ನು ತನಿಖೆಯಲ್ಲಿ ಬೇಕಾದಾಗ ಅಥವಾ ನ್ಯಾಯಾಲಯವು ಹಾಜರುಪಡಿಸಲು ಹೇಳಿದಾಗ ಹಾಜರುಪಡಿಸಬೇಕೆಂದು ತಿಳುವಳಿಕೆ ನೀಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಕೊಡಬೇಕಾದ ಲಂಚದ ಹಣವನ್ನು ಹಾಜರುಪಡಿಸಲು ದೂರುದಾರರಿಗೆ ತಿಳಿಸಿದಾಗ ಅವರು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರು ಹೇಳಿದಂತೆ ಆ ಹಣವನ್ನು ಪಂಚ-1 ನೇದವರು ತೆಗೆದುಕೊಂಡು ಅವುಗಳ ಮೌಲ್ಯ ಮತ್ತು ನಂಬರ್‌ಗಳನ್ನು ಓದಿ ಹೇಳಿದ್ದು, ಪಂಚ-2 ರವರು ಹಾಳೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ಅವು ರೂ. 500/- ಮುಖಬೆಲೆಯ 10 ನೋಟುಗಳಾಗಿದ್ದು ಒಟ್ಟು ರೂ. 5,000/- ಗಳಾಗಿರುತ್ತವೆ. ದೂರುದಾರರು ಹಾಜರುಪಡಿಸಿದ ನೋಟುಗಳ ಎರಡೂ ಬದಿಗಳಿಗೆ ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ಸಿಬ್ಬಂದಿಯವರು ಪಿನಾಪ್ತಲಿನ್ ಪುಡಿಯ ಲೇಪನ ಮಾಡಿರುತ್ತಾರೆ. ತನಿಖಾಧಿಕಾರಿಯವರು ಪಂಚ ಸಾಕ್ಷಿ-2 ರವರಿಗೆ ನೋಟುಗಳನ್ನು ತೆಗೆದುಕೊಂಡು ಎಣಿಸಿ ನೋಡಿ ನೋಟುಗಳನ್ನು ದೂರುದಾರರ ಶರ್ಟಿನ ಎದೆಯ ಮೇಲಿನ ಎಡಕಿನ ಕಿಸೆಯಲ್ಲಿಡಲು ತಿಳಿಸಿದಂತೆ ಅವರು ನೋಟುಗಳನ್ನು ಎರಡೂ ಕೈಗಳಿಂದ ಎಣಿಸಿ 5,000/- ರೂ.ಗಳಿವೆ ಅಂತಾ ಹೇಳಿ ದೂರುದಾರರ ಕಿಸೆಯಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಗಳು ಪಂಚ-2 ನೇದವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ದೂರುದಾರರಿಗೆ ಸದರಿ ಹಣವನ್ನು ಮೇಲಿಂದ ಮೇಲೆ ಹಿಡಿಯಬಾರದು, ಹೊರಗೆ ತೆಗೆಯಬಾರದು ಅಂತ ಹೇಳಿ, ನೀವು ಎದುರುದಾರರಿಗೆ ಭೇಟಿಯಾಗಿ ನಿಮ್ಮ ಕೆಲಸದ ಬಗ್ಗೆ ಕೇಳಿರಿ ಆಗ ಎದುರುದಾರರು ಲಂಚದ ಹಣ ಕೇಳಿದರೆ ಈ 5,000/- ರೂ.ಗಳನ್ನು ಅವರಿಗೆ ಕೊಡಬೇಕು, ಎದುರುದಾರರು ಹಣವನ್ನು ಮುಟ್ಟಿ ತೆಗೆದುಕೊಂಡರೆ ಹಣವನ್ನು ಇಟ್ಟುಕೊಳ್ಳುವ ಜಾಗೆಯನ್ನು ನೋಡಿಕೊಂಡು ಬಂದು ನಿಮ್ಮ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿ ತಮಗೆ ತಿಳಿಸಬೇಕು ಅಂತ ತಿಳುವಳಿಕೆ ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಠಾಣೆಯ ಡಿಜಿಟಲ್ ವಾಯ್ಸ್ ರೆಕಾರ್ಡರ್‌ನ್ನು ನೀಡಿ ಇದರಲ್ಲಿ ಎದುರುದಾರರಿಗೆ ಲಂಚದ

ಹಣ ಕೊಡುವಾಗ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವಂತೆ ಸೂಚಿಸಿರುತ್ತಾರೆ. ತನಿಖಾಧಿಕಾರಿಗಳು ಪಂಚ 1 ರವರಿಗೆ ದೂರುದಾರರೊಂದಿಗೆ ಹೋಗಿ ದೂರುದಾರರು ಎದುರುದಾರರೊಂದಿಗೆ ಮಾತನಾಡುವಾಗ ಹತ್ತಿರದಲ್ಲಿದ್ದು, ಅಲ್ಲಿ ನಡೆಯುವ ವಿದ್ಯಮಾನಗಳನ್ನು, ಸಂಭಾಷಣೆಯನ್ನು ಗಮನಿಸಿ ತಾವು ಕೇಳಿದಾಗ ಹೇಳಬೇಕು ಅಂತ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪಂಚ 2 ಹಾಗೂ ಸಿಬ್ಬಂದಿಗಳಿಗೆ ತಮ್ಮ ಜೊತೆಯಲ್ಲಿ ಇರಬೇಕೆಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಮತ್ತು ಸಿಬ್ಬಂದಿಯವರೆಲ್ಲರೂ ಸಾಬೂನು ನೀರಿನಿಂದ ಸ್ವಚ್ಛವಾಗಿ ಕೈಗಳನ್ನು ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 01/10/2018 ರಂದು ಮಧ್ಯಾಹ್ನ 1–10 ಘಂಟೆಯಿಂದ 2–40 ಘಂಟೆಯವರೆಗೆ ವಿಜಯಪುರ ಎಸಿಬಿ ಕಛೇರಿಯಲ್ಲಿ ಕಂಪ್ಯೂಟರ್‌ನಲ್ಲಿ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5) ದಿನಾಂಕ 01/10/2018 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಇಲಾಖಾ ವಾಹನ ಗಳಲ್ಲಿ ಹೊರಟು ವಿಜಯಪುರ ಡಿ.ಡಿ.ಪಿ.ಐ. ಆಫೀಸ್ ಸಮೀಪ ಬಂದು ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರು ತಮ್ಮ ಖಾಸಗಿ ಕೋಣೆಯಲ್ಲಿ ಇರುತ್ತಾರೋ ಎನ್ನುವುದರ ಬಗ್ಗೆ ತಿಳಿದುಕೊಳ್ಳುವಂತೆ ತಿಳಿಸಿದಾಗ ದೂರುದಾರರು ತಮ್ಮ ಮೊಬೈಲ್ ನಂ. 8123439628 ನಿಂದ ಎದುರುದಾರರ ಮೊಬೈಲ್ ನಂ. 8073186698 ನೇದ್ದಕ್ಕೆ ಫೋನ್ ಮಾಡಿ ಸ್ಪೀಕರ್ ಆನ್ ಮಾಡಿ ಮಾತನಾಡಿದಾಗ ಎದುರುದಾರರು ದೂರುದಾರರಿಗೆ "ಈಗ ನಾನು ಸಾರವಾಡಕ್ಕೆ ಹೊರಟೀನಿ, ಅರ್ಧ ತಾಸ ಬಿಟ್ಟು ಬರ್ತೀನಿ" ಅಂತ ಹೇಳಿರುತ್ತಾರೆ. ಹಾಗಾಗಿ ಎಲ್ಲರೂ ಎದುರುದಾರರ ಬರುವಿಕೆಗಾಗಿ ಅಲ್ಲಿಯೇ ಕಾಯುತ್ತಾ ನಿಂತುಕೊಂಡಾಗ ಎದುರುದಾರರು 4.30 ಘಂಟೆಯಾದರೂ ಎದುರುದಾರರಿಂದ ದೂರುದಾರರಿಗೆ ಯಾವುದೇ ಕರೆ ಬಾರದಿದ್ದಾಗ ತನಿಖಾಧಿಕಾರಿಗಳು ಮತ್ತೆ ಕರೆ ಮಾಡಲು ತಿಳಿಸಿದಾಗ ದೂರುದಾರರು ಕರೆ ಮಾಡಿದ್ದನ್ನು ಎದುರುದಾರರು ಸ್ವೀಕರಿಸಿರುವುದಿಲ್ಲ. ಮತ್ತೆ ದೂರುದಾರರು 4–38 ಘಂಟೆಗೆ ಕರೆ ಮಾಡಿ ಸ್ಪೀಕರ್ ಆನ್ ಮಾಡಿ ಮಾತನಾಡಿದಾಗ ಎದುರುದಾರರು ದೂರುದಾರರಿಗೆ "ಬ್ಯುಸಿ ಇದ್ದೀನಿ, ಆಮೇಲೆ ಭೇಟಿಯಾಗೋಣ" ಅಂತ ತಿಳಿಸಿರುತ್ತಾರೆ. ನಂತರ 5–20 ಘಂಟೆಗೆ ತನಿಖಾಧಿಕಾರಿಗಳು ಮತ್ತೆ ಎದುರುದಾರರಿಗೆ ಸಂಪರ್ಕಿಸಲು ದೂರುದಾರರಿಗೆ ಹೇಳಿದಾಗ ಅವರು ತಮ್ಮ ಅದೇ ಮೊಬೈಲ್‌ನಿಂದ 5–24, 5–26 ಮತ್ತು 5–27 ಘಂಟೆಗಳಿಗೆ ಮೂರುಬಾರಿ ಕರೆ ಮಾಡಿದರೂ ಎದುರುದಾರರು ಸ್ವೀಕರಿಸಿರುವುದಿಲ್ಲ. ಹಾಗಾಗಿ

ತನಿಖಾಧಿಕಾರಿಗಳು ಇನ್ನು ಕರೆ ಮಾಡುವುದು ಬೇಡ, ಮೇಲಿಂದ ಮೇಲೆ ಕರೆ ಮಾಡಿದರೆ ಎದುರುದಾರರಿಗೆ ಸಂಶಯ ಬರುತ್ತದೆ ಎಂದು ಹೇಳಿ ಎಲ್ಲರನ್ನೂ ಕರೆದುಕೊಂಡು ಮರಳಿ ಠಾಣೆಗೆ ವಾಪಸ್ ಆಗಿರುತ್ತಾರೆ ನಂತರ ಎಲ್ಲರಿಗೆ ದಿ: 04/10/2018 ರಂದು ಬೆಳಿಗ್ಗೆ 9-00 ಘಂಟೆಗೆ ಬರಬೇಕೆಂದು ತಿಳಿಸಿರುತ್ತಾರೆ. ನಂತರ ದಿ: 4/10/2018 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರು ಎಲ್ಲಿ ಇರುತ್ತಾರೆ ಎಂದು ಕೇಳಿದಾಗ ದೂರುದಾರರು ವಿಜಯಪುರ ಡಿ.ಸಿ. ಆಫೀಸ್ ಸಮೀಪ ಎದುರುದಾರರು ಕೆಲಸ ನಿರ್ವಹಿಸುವ ರೂಮಿನಲ್ಲಿ ಇರುತ್ತಾರೆಂದು ಹೇಳಿರುತ್ತಾರೆ. ಆಗ ತನಿಖಾಧಿಕಾರಿಗಳು ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಇಲಾಖೆಯ ಜೀಪ್ ನಂ. ಕೆ.ಎ. 04- ಜಿ-1286 ಮತ್ತು ಇಲಾಖೆಯ ಹೊಂಡಾ ಶೈನ್ ಮೋಟಾರ್ ಸೈಕಲ್ ನಂ. ಕೆ.ಎ.04- ಜಿ-1444 ರಲ್ಲಿ ಹೊರಟು ವಿಜಯಪುರ ಡಿ.ಸಿ. ಆಫೀಸ್ ಸಮೀಪ ಬಂದು ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಗಳು, ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಬಾಬು ಗೌಡ ರವರಿಗೆ ಈ ಮೊದಲು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಗಳನ್ನು ಪುನ: ನೀಡಿ ಇಬ್ಬರಿಗೂ ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ಎದುರುದಾರರನ್ನು ಭೇಟಿಯಾಗಲು ಹೋದಾಗ ಎದುರುದಾರರು ಕೆಲಸ ಮಾಡುವ ರೂಮಿನಲ್ಲಿ ಇದ್ದುದ್ದನ್ನು ನೋಡಿ ದೂರುದಾರರು ಎದುರುದಾರರಿಗೆ ತಮ್ಮ ಕೆಲಸ ಏನಾಯಿತು ಅಂತ ಕೇಳಿರುತ್ತಾರೆ. ಆಗ ಎದುರುದಾರರು ದೂರುದಾರರಿಗೆ ಮಾಡೋಣ ನಡೀರಿ ಅಂತ ದೂರುದಾರರು ಮತ್ತು ಪಂಚ-1 ರವರನ್ನು ಕರೆದುಕೊಂಡು ಎದುರುದಾರರ ರೂಮಿನ ಹತ್ತಿರದಲ್ಲಿದ್ದ ವಾಹನ ನಿಲ್ಲುವ ಪಾರ್ಕಿಂಗ್ ಸ್ಥಳದಲ್ಲಿ ಕರೆದುಕೊಂಡು ಬಂದು ನಿಮ್ಮ ಕೆಲಸ ಮಾಡೋಣ "ನಾ ಹೇಳೀನಲ್ಲ ರೊಕ್ಕ" ಅಂತ ಕೇಳಿರುತ್ತಾರೆ. ಆಗ ದೂರುದಾರರು "ತಂದೀನಿ"ಅಂತ ಹೇಳಿ ತಮ್ಮ ಶರ್ಟಿನ ಎದೆಯ ಮೇಲಿನ ಎಡಕಿನ ಕಿಸೆಯಲ್ಲಿಟ್ಟಿದ್ದ ಪಿನಾಫ್ತಲಿನ್ ಪುಡಿ ಲೇಪಿತ ಲಂಚದ ಹಣವಾದ ರೂ. 5,000/- ಗಳನ್ನು ತೆಗೆದುಕೊಟ್ಟಾಗ ಎದುರುದಾರರು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡೂ ಕೈಗಳಿಂದ ಎಣಿಸಿ ನೋಡಿ ತಮ್ಮ ಶರ್ಟಿನ ಎದೆಯ ಮೇಲಿನ ಎಡಕಿನ ಕಿಸೆಯಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ತನಿಖಾಧಿಕಾರಿಗಳು ಅವರಿಗೆ ನೀಡಿದ ಸೂಚನೆ ಪ್ರಕಾರ ತಮ್ಮ ಕೈವಸ್ತ್ರದಿಂದ ಮುಖ ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ತಮ್ಮ ಗುರುತಿನ ಚೀಟಿಯನ್ನು ತೋರಿಸಿ ತಮ್ಮ ಹಾಗೂ ಪಂಚರ ಪರಿಚಯ ಹೇಳಿ ಎದುರುದಾರರ ಹೆಸರನ್ನು ವಿಚಾರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು

ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಬಲಗೈಯನ್ನು ಒಂದು ಬಟ್ಟಲಿನಲ್ಲಿ ಹಾಗೂ ಎಡಗೈಯನ್ನು ಇನ್ನೊಂದು ಬಟ್ಟಲಿನ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳ ನಿರ್ದೇಶನದಂತೆ ಪಂಚ 1 ರವರು ಎದುರುದಾರರ ಶರ್ಟಿನ ಎದೆಯ ಮೇಲಿನ ಎಡ ಕಿಸೆಯಲ್ಲಿಂದ ಲಂಚದ ಹಣವನ್ನು ಹಾಜರ್‌ಪಡಿಸಿಕೊಂಡು ಪಂಚ 2 ರವರ ಹತ್ತಿರವಿದ್ದ ಈ ಹಿಂದೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೋಟಿನ ಮೌಲ್ಯ ಮತ್ತು ನಂಬರ್‌ಗಳನ್ನು ಗುರ್ತಿಸಿಕೊಂಡ ಹಾಳೆಯನ್ನು ತೆಗೆದು ಪರಿಶೀಲಿಸಿದಾಗ ನೋಟುಗಳ ಮೌಲ್ಯ ಮತ್ತು ನಂಬರ್‌ಗಳು ತಾಳೆಯಾಗಿರುತ್ತವೆ. ತನಿಖಾಧಿಕಾರಿಗಳು ಸದರಿ ಹಣವನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಎದುರುದಾರರು ಸಿಕ್ಕಿರುವ ಸ್ಥಳವು ಸಾರ್ವಜನಿಕ ಸ್ಥಳವಿದ್ದು, ಜನಜಂಗುಳಿಯಿಂದ ಕೂಡಿದ್ದರಿಂದ ಹಾಗೂ ವಿದ್ಯುತ್ ಸಂಪರ್ಕದ ವ್ಯವಸ್ಥೆ ಇಲ್ಲದ್ದರಿಂದ ತನಿಖಾಧಿಕಾರಿಗಳು ಎದುರುದಾರರಿಗೆ, ಪಂಚರಿಗೆ, ದೂರುದಾರರಿಗೆ ಹಾಗೂ ಸಿಬ್ಬಂದಿ ಜನರಿಗೆ ಠಾಣೆಯ ವಾಹನಗಳಲ್ಲಿ ಕರೆದುಕೊಂಡು ವಿಜಯಪುರ ಎಸಿಬಿ ಪೊಲೀಸ್ ಠಾಣೆಗೆ ಬಂದಿರುತ್ತಾರೆ. ತನಿಖಾಧಿಕಾರಿಗಳು ಬದಲೀ ಶರ್ಟಿನ ವ್ಯವಸ್ಥೆ ಮಾಡಿ ಎದುರುದಾರರ ಶರ್ಟನ್ನು ಹಾಜರುಪಡಿಸಲು ತಿಳಿಸಿದಾಗ ಎದುರುದಾರರು ತಮ್ಮ ಶರ್ಟನ್ನು ಹಾಜರುಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಎದುರುದಾರರ ಶರ್ಟಿನ ಎದೆಯ ಮೇಲಿನ ಎಡಕಿನ ಕಿಸೆಯನ್ನು ಹೊರಗೆ ಮಾಡಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ದೂರುದಾರರಿಗೆ ಲಂಚದ ಹಣ ನೀಡುವ ಕಾಲಕ್ಕೆ ರೆಕಾರ್ಡ್ ಮಾಡಿಕೊಳ್ಳಲು ಕೊಟ್ಟ ಡಿಜಿಟಲ್ ವಾಯ್ಸ್ ರೆಕಾರ್ಡರ್ ಹಾಜರುಪಡಿಸುವಂತೆ ತಿಳಿಸಿದಾಗ ಅವರು ಅದನ್ನು ಹಾಜರುಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಅದನ್ನು ಚಾಲು ಮಾಡಿದಾಗ ಅದರೊಳಗೆ ಯಾವುದೇ ಧ್ವನಿ ರೆಕಾರ್ಡ್ ಆಗಿರುವುದಿಲ್ಲ. ಈ ಬಗ್ಗೆ ದೂರುದಾರರಿಗೆ ಅವರು ಕೇಳಿದಾಗ ದೂರುದಾರರು ಗಡಿಬಿಡಿಯಲ್ಲಿ ವಾಯ್ಸ್ ರೆಕಾರ್ಡರ್ ಬಟನ್‌ನ್ನು ಸರಿಯಾಗಿ ಪ್ರೆಸ್ ಮಾಡಿರುವುದಿಲ್ಲ. ಆದ್ದರಿಂದ ಯಾವುದೇ ವಾಯ್ಸ್ ರೆಕಾರ್ಡ್ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಘಟನೆಗೆ ಸಂಬಂಧಿಸಿದಂತೆ ಸಮಜಾಯಿಷಿಯನ್ನು ಬರೆದುಕೊಡಲು ತಿಳಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರಿಂದ ಅವರ ಸಾರವಾಡ ಗ್ರಾಮದ ಹೊಲದ ಪಾಲು ಅರ್ಜಿಯ ಚಲನ್ ತುಂಬುವ ಹಣವನ್ನು ಪಡೆದಿರುತ್ತೇನೆ. ಇದನ್ನು ಬಿಟ್ಟು ಬೇರೆ ಯಾವುದೇ ರೀತಿ ಲಂಚವಾಗಿ

ಪಡೆದಿರುವುದಿಲ್ಲ. ನನ್ನಿಂದ ಯಾವುದೇ ತಪ್ಪುಗಳು ಆಗಿರುವುದಿಲ್ಲ. ನಾನು ಪಡೆದಿರುವುದು ಸರಕಾರಕ್ಕೆ ಭರಣ ಮಾಡುವ ಚಲನ್ ಹಣ ಮಾತ್ರ" ಎಂದು ಬರೆದುಕೊಟ್ಟಿದ್ದನ್ನು ತನಿಖಾಧಿಕಾರಿಗಳು ಸದರಿ ಸಮಜಾಯಿಷಿ ಬಗ್ಗೆ ದೂರುದಾರರಿಗೆ ಕೇಳಿದಾಗ ಎದುರುದಾರರು ತಮ್ಮಿಂದ ಲಂಚದ ಹಣ ಕೇಳಿ ಪಡೆದುಕೊಂಡಿರುತ್ತಾರೆ ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ನೀಡಿದ ಸಮಜಾಯಿಷಿಯು ನಿಜವಲ್ಲ ಎಂದು ಹೇಳಿರುತ್ತಾರೆ. ಅದೇ ರೀತಿ ನೆರಳು ಸಾಕ್ಷಿರವರನ್ನು ವಿಚಾರಿಸಿದಾಗ ಅವರೂ ಸಹ ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆ. ಇದನ್ನು ತಾನು ಸಮೀಪದಲ್ಲಿ ನಿಂತು ನೋಡಿರುತ್ತೇನೆ. ಹಾಗೂ ಅವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಕೇಳಿರುತ್ತೇನೆ. ಎದುರುದಾರರು ಸಮಜಾಯಿಷಿಯಲ್ಲಿ ಬರೆದ ವಿಷಯ ನಿಜವಲ್ಲ ಎಂದು ಹೇಳಿರುತ್ತಾರೆ. ಹಾಗಾಗಿ ಎದುರುದಾರರ ಸಮಜಾಯಿಷಿಯನ್ನು ಒಪ್ಪಿಕೊಳ್ಳಲು ಬರಲಾರದು.

6) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

8) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

9) ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂದಿಸಿದಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಸಮಜಾಯಿಷಿಯನ್ನು ಕೇಳಲಾಯಿತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 01/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

10) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರ ತಂದೆಯವರಾದ ಸೋಮನಾಥ ಎಂಬುವವರು ಬಬಲೇಶ್ವರ ತಾಲ್ಲೂಕು ಸಾರವಾಡ ಗ್ರಾಮದಲ್ಲಿ ಸ.ನಂ. 522 ನೇದರಲ್ಲಿ 5 ಎಕರೆ 20 ಗುಂಟೆ ಜಮೀನನ್ನು ತಮ್ಮ ಮಕ್ಕಳಾದ ದೂರುದಾರರು ಹಾಗೂ ಇನ್ನೊಬ್ಬ ಮಗನಾದ ಶ್ರೀ ಮಲ್ಲಿಕಾರ್ಜುನ ರವರ ಹೆಸರಿನಲ್ಲಿ ವಾಟ್ನಿ ಮಾಡಿಸಲು ದಿ: 21/08/2018 ರಂದು ಬಬಲೇಶ್ವರ ತಾಲ್ಲೂಕು ಕಛೇರಿಯಲ್ಲಿ ಅರ್ಜಿಯನ್ನು ಕೊಟ್ಟಿರುತ್ತಾರೆ. ಆ ಬಳಿಕ ಎದುರುದಾರರು ವಿಜಯಪುರ ಡಿ.ಸಿ. ಆಫೀಸಿನ ಸಮೀಪವಿರುವ ತಮ್ಮ ರೂಮಿಗೆ ದೂರುದಾರರನ್ನು ಕರೆಯಿಸಿಕೊಂಡು ವಾಟ್ನಿ ಮಾಡಿಸಲು ರೂ. 5,000/- ಗಳನ್ನು ಲಂಚ ದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದಿ: 29/08/2018 ರಂದು ಎದುರುದಾರರು ತಮ್ಮ ಮೊಬೈಲ್ ಮೂಲಕ ದೂರುದಾರರನ್ನು ಸಂಪರ್ಕಿಸಿ ವಿಜಯಪುರ ತಹಶೀಲ್ದಾರ್ ಆಫೀಸಿನ ಮುಂದೆ ಕರೆಯಿಸಿಕೊಂಡು ವಾಟ್ನಿ ಅರ್ಜಿಯನ್ನು ಬಹಳ ದಿನ ಇಟ್ಟುಕೊಳ್ಳಲು ಆಗುವುದಿಲ್ಲ, ಲಂಚದ ಹಣ ಕೊಟ್ಟರೆ ಸಾಯಂಕಾಲದೊಳಗೆ ಅಪ್ರೂವಲ್ ಮಾಡಿಸುತ್ತೇನೆ ಎಂಬಿತ್ಯಾದಿ ನಡೆದ ಸಂಭಾಷಣೆಗಳನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದಿ: 04/10/2017 ರಂದು ಬೆಳಿಗ್ಗೆ 10-30 ಘಂಟೆ ವೇಳೆಗೆ ವಿಜಯಪುರ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿರುವ ಕಾರ್ ಪಾರ್ಕಿಂಗ್ ಸ್ಥಳದಲ್ಲಿ ಎದುರುದಾರರು ದೂರುದಾರರ ತಂದೆಯವರು ಸಲ್ಲಿಸಿದ ಅರ್ಜಿಯಲ್ಲಿ ನಮೂದಿಸಿದ ಜಮೀನಿನ ವಾಟ್ನಿ ಮಾಡಿಸಿಕೊಡಲು ದೂರುದಾರರಿಂದ ಲಂಚದ ಹಣ ರೂ. 5,000/- ಗಳನ್ನು ಬೇಡಿ ಅಕ್ರಮವಾಗಿ ಪಡೆದುಕೊಂಡು, ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಚನ್ನವೀರಯ್ಯ ತಂದೆ ಬಸವರಾಜ ಹಿರೇಮಠ, ಗ್ರಾಮಲೆಕ್ಕಾಧಿಕಾರಿಗಳು, ಸಾರವಾಡ ಗ್ರಾಮ, ವಿಜಯಪುರ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ

14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

2/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.